given. The question whether such documents are to be permitted to be registered or otherwise and whether such registration amounts to "opposed to public policy or otherwise" is being examined by the Government and appropriate decision will be taken shortly. Till such time the District Registrar has been instructed to withdraw the portion of the direction issued in his letter/Circular dated 18-7-87 which affects the interest of the Joint Holders. In my opinion this is one of the instances of red tapism. I wish that the registrar would register and also take note that public should not be suppressed like this.

(ಶ್ರೀ ಎಂ. ಮಾಹದೇವ್.—ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಕರ್ನಾಟಕ ಸರ್ಕಾರದ ಶೀಘ್ರಲಿಪಿಗಾರರ ನೇಮಕಾತಿ ಬಗ್ಗೆ

ಶ್ರೀ ರಾಮಲಿಂಗ ರೆಡ್ಡಿ (ಜಯನಗರ).—ಮಾನ್ಯ ಅಧ್ಯಕ್ಷರೇ ಕರ್ನಾಟಕ ಸರ್ಕಾರದ ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಆಯ್ಕೆ ಪ್ರಾಧಿಕಾರದವರು ಸಚಿವಾಲಯಕ್ಕೆ ಬೆರಳಚ್ಚುಗಾರರಾಗಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಕಳುಹಿಸಿ ತಿಂಗಳಾನುಗಟ್ಟಲೆ ಆಗಿದ್ದರೂ ಸರ್ಕಾರದ ಸಚಿವಾಲಯದವರು ಇನ್ನೂ ನೇಮಕಾತಿಯ ಆದೇಶಗಳನ್ನು ಕಳುಹಿಸದಿರುವುದರಿಂದ ಆಯ್ಕೆಯಾದ ಅಭ್ಯರ್ಥಿಗಳಿಗೆ ಉಂಟಾಗುತ್ತಿರುವ ತೊಂದರೆಯ ವಿಚಾರವನ್ನು ಈ ನಿಯಮದಡಿಯಲ್ಲಿ ಕೇಳಲಿಚ್ಛಿಸುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಉಪ ಸಭಾಧ್ಯಕ್ಷರೆ. ಈ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದು ಸರಿಪಡಿಸುವಂತೆ ತಿಳಿಸುತ್ತೇನೆ.

ಉಪಾಧ್ಯಕ್ಷೆಗೌಡರು.—ಲಕ್ಕಪ್ಪನವರೇ, ನಿಮ್ಮ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದಾರೆ...

ಶ್ರೀ ಕೆ. ಲಕ್ಕಪ್ಪ.—ಆಹಾರ ವಿತರಣೆಯ ಬಗ್ಗೆ ಅಲ್ಲಿ ಬ್ಲಾಕ್ ಮಾರ್ಕೆಟ್ ನಡೆಯುತ್ತಿದೆ ಇದು ಬಹಳ ಮಹತ್ವದ ವಿಚಾರ...

ಉಪಾಧ್ಯಕ್ಷೆಗೌಡರು.—ಮಂತ್ರಿಗಳು ಟೈಂ ಕೇಳಿದ್ದಾರೆ. ಇನ್ನೊಂದು ದಿವಸ ತೆಗೆದು ಕೊಳ್ಳೋಣ.

ಶ್ರೀ ಕೆ. ಲಕ್ಕಪ್ಪ.—ಈ ವಾರದಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಕೊಡಬೇಕು.

ಉಪಾಧ್ಯಕ್ಷೆಗೌಡರು.—ಆಗಬಹುದು.

ಮಂಗಳೂರು-ಕಡೂರು ರಾಜ್ಯ ಹೆದ್ದಾರಿಯಲ್ಲಿ ಬರುವ ಚಾರ್ಮಾಡಿಘಾಟ್ ರಸ್ತೆಯನ್ನು ದುರಸ್ತಿಗೊಳಿಸುವ ಬಗ್ಗೆ

ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಉಪಾಧ್ಯಕ್ಷೆಗೌಡರೆ, ಮಂಗಳೂರು-ಕಡೂರು ರಾಜ್ಯ ಹೆದ್ದಾರಿಯಲ್ಲಿ ಚಾರ್ಮಾಡಿ ಘಾಟ್ ರಸ್ತೆ ಸರಿಯಾಗಿ ರಿಪೇರಿ ಮಾಡದೆ ಮಳೆಗಾಲದಲ್ಲಿ ವಾಹನ ಸಂಚಾರ ಸ್ಥಗಿತವಾಗಿ ಅಪಘಾತಗಳು ಆಗುವ ಸಂಭವವಿದ್ದು, ಹಲವು ಕಡೆ ತಿರುವುಗಳು ಕುಸಿಯುತ್ತಿದ್ದು ಹಾಗೂ ಹಲವು ಜಿಲ್ಲೆಗಳ ಸಂಪರ್ಕ ಕಡಿದು ಹೋಗುವ ಸಂಭವವಿರುವುದರಿಂದ ಈ ಬಗ್ಗೆ ಸೂಕ್ತ ಕ್ರಮಕ್ಕಾಗಿ ಮಾನ್ಯ ಲೋಕೋಪಯೋಗಿ ಖಾತೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಸಚಿವರು).—ಮಾನ್ಯ ಉಪಾಧ್ಯಕ್ಷಿಣಿ ಗೌಪರೆ, ಕಡೂರು-ಮಂಗಳೂರು ರಸ್ತೆಯ ಚಾರ್ಮಾಡಿ ಘಾಟ್ ವಿಭಾಗವು ೧೨.೪೦ ಕಿ.ಮೀ. ಉದ್ದವಿದ್ದು

ಇದನ್ನು ಅಭಿವೃದ್ಧಿಪಡಿಸಬೇಕೆಂದು ೯೮.೩೦ ಲಕ್ಷ ರೂ. ಗಳ ಅಂದಾಜಿನಲ್ಲಿ ಕೇಂದ್ರ ರಸ್ತೆ ಫಂಡ್‌ನಲ್ಲಿ ತೆಗೆದುಕೊಳ್ಳಲಾಗಿದೆ. ಈ ಕಾಮಗಾರಿಗಳನ್ನು ವಿಪ್ರಿಲ್ ೮೯ರಂದು ತೆಗೆದುಕೊಳ್ಳಲಾಯಿತು. ಮೇ ೯೦ರವರೆಗೂ ೩೭.೫೪ ಲಕ್ಷ ರೂ ಗಳ ಪ್ರಗತಿಯಾಗಿದೆ. ಈ ಕಾಮಗಾರಿಯಲ್ಲಿ ರಸ್ತೆಗಳನ್ನು ಅಗಲ ಪಡಿಸುವ ಕಾರ್ಯದಲ್ಲಿ ಕೆಲವು ಮರಗಳನ್ನು ತೆಗೆಯಬೇಕಾಗುತ್ತದೆ ಇದು ದಟ್ಟ ಅರಣ್ಯದಲ್ಲಿರುವುದರಿಂದ ಅರಣ್ಯ ಇಲಾಖೆಯ ಅನುಮತಿ ಬೇಕಾಗುತ್ತದೆ. ಅರಣ್ಯ ಇಲಾಖೆಯವರು ಈ ಅನುಮತಿಗಾಗಿ ಕೇಂದ್ರ ಸರ್ಕಾರಕ್ಕೆ ಬರೆದಿದ್ದಾರೆ. ಈ ಕಾಮಗಾರಿಯನ್ನು ಜೂನ್ ೯೧ರ ವೇಳೆಗೆ ಮುಗಿಸುವ ಗುರಿ ಇದೆ. ಕೇಂದ್ರ ಸರ್ಕಾರದಿಂದ ಬೇಗ ಅನುಮತಿ ಪಡೆದು ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಮುಗಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಉಪಾಧ್ಯಕ್ಷೆಯರು.—ದಮಯಂತಿ ಬೋರೇಗೌಡರವರೆ, ನಿಮ್ಮ ವಿಷಯದ ಬಗ್ಗೆಯೂ ಮಾನ್ಯ ಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದಾರೆ. ಇದನ್ನು ಮುಂದೆ ತೆಗೆದುಕೊಳ್ಳಲಾಗುತ್ತದೆ.

ಶಾಸನ ರಚನಾ ಕಾರ್ಯಕಲಾಪಗಳು

೧೯೯೦ನೇ ಇಸವಿಯ ಕರ್ನಾಟಕ ರಾಜ್ಯದ ನಾಗರೀಕ ಸೇವೆಗಳ (ನಿರಸನ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು). ಮಾನ್ಯ ಉಪಾಧ್ಯಕ್ಷೆಯರೇ ಮುಖ್ಯಮಂತ್ರಿಗಳ ಪರವಾಗಿ ''೧೯೯೦ ನೇ ಇಸವಿಯ ಕರ್ನಾಟಕ ರಾಜ್ಯದ ನಾಗರೀಕ ಸೇವೆಗಳ (ನಿರಸನ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು. ಪ್ರಸ್ತಾಪ ಏನೆಂದರೆ ''೧೯೯೦ನೇ ಇಸವಿಯ ಕರ್ನಾಟಕ ರಾಜ್ಯದ ನಾಗರೀಕ ಸೇವೆಗಳ (ನಿರಸನ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''.

ಪ್ರಸ್ತಾವ ಅಂಗೀಕರಿಸಲಾಯಿತು ಮತ್ತು ಅನುಮತಿ-ನೀಡಲಾಯಿತು

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—ಮಾನ್ಯ ಉಪಾಧ್ಯಕ್ಷೆಯರೇ, ''೧೯೯೦ರ ಇಸವಿಯ ಕರ್ನಾಟಕ ರಾಜ್ಯದ ನಾಗರೀಕ ಸೇವೆಗಳ (ನಿರಸನ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

* Annexure

೧೯೯೦ನೇ ಇಸವಿಯ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಕೆ. ಹೆಚ್. ಪಾಟೀಲ್ (ಬಂದಾಯ ಮತ್ತು ಕಾರ್ಮಿಕ ಮಂತ್ರಿಗಳು). ಮಾನ್ಯ ಅಧ್ಯಕ್ಷರೆ "೧೯೯೦ನೇ ಇಸವಿಯ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕವನ್ನು" ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನ್ನು ಮಂಡಿಸಲಾಯಿತು

ಶ್ರೀ ಪಾಟೀಳ್ ನಾಗರಾಜ್.—ಮಾನ್ಯ ಉಪಾಧ್ಯಕ್ಷೆಯವರೇ ವಿಧೇಯಕಗಳ ಮಂಡನೆ ಕನ್ನಡದಲ್ಲಿಯೇ ಆಗ ಬೇಕೆಂದು ಅನೇಕ ಸಾರಿ ಮನವಿಮಾಡಿಕೊಂಡಿರುತ್ತೇನೆ. ವಿಧೇಯಕಗಳು ಕನ್ನಡದಲ್ಲೀಯೇ ಇರಬೇಕು. ಆದರೂಸಹ ಇವರು ಇಗ್ಲೆಂಡಿನಿಂದ ಬಂದವರಂತೆ ಆಡುತ್ತಿದ್ದಾರೆ. ಈರೀತಿ

Annexure See Page No. 142